# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1606

**ಸದಸ್ಯರ ಹೆಸರು** : ಡಾ|| ಎಂ.ಜಿ ಮುಳೆ (ವಿಧಾನ ಸಭಾ ಕ್ಷೇತ್ರ)

**ಉತ್ತರಿಸುವ ದಿನಾಂಕ** : 21.03.2025

**ಉತ್ತರಿಸುವ ಸಚಿವರು** : ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಹಲವಾರು ವರ್ಷಗಳ ಹಿಂದೆಯೇ ಜಾರಿಗೆ ಬಂದಿದ್ದು. ಇದರ ಅನುಷ್ಠಾನ ಎಲ್ಲ ಇಲಾಖೆಗಳಲ್ಲಿ ಆಗುತ್ತಿದೆಯೇ: | ಕರ್ನಾಟಕ ರಾಜ್ಯ ಸರ್ಕಾರದ ಎಲ್ಲಾ ಕಚೇರಿಗಳಲ್ಲಿ ಆಡಳಿತದಲ್ಲಿ ಕನ್ನಡ ಭಾಷೆಯನ್ನು ಅನುಷ್ಠಾನ ಮಾಡಲಾಗುತ್ತಿದೆ. |
| ಆ) | ಕಚೇರಿಗಳಲ್ಲಿ ಟಿಪ್ಪಣಿಗಳನ್ನು ಬರೆಯಲು ಸಹಾಯಕವಾಗುವಂತ ಆಡಳಿತ ಶಬ್ದಕೋಶ ಮಾದರಿ ಪತ್ರಗಳು ಕಚೇರಿ ಕೈಪಿಡಿ ಮುಂತಾದ ಪುಸ್ತಕಗಳನ್ನು ಎಲ್ಲಾ ಇಲಾಖೆಗಳಿಗೆ ಸರಬರಾಜು ಮಾಡಲಾಗಿದೆಯೇ: ಅಥವಾ ಯಾವ ರೀತಿಯ ಪುಸ್ತಕ ಮತ್ತು ಪರಿಕರಗಳನ್ನು ನೀಡಲಾಗಿದೆ: | ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಆಡಳಿತ ಪದಕೋಶವನ್ನು 2002 ರಲ್ಲಿ ಹೊರತಂದಿದೆ. 2016 ರಿಂದ ಪ್ರಾಧಿಕಾರದ ಅಂತರ್ಜಾಲ ತಾಣದಲ್ಲಿ ಈ ಪುಸ್ತಕವನ್ನು ಲಭ್ಯವಿರಿಸಿದ್ದು, ಇದನ್ನು ಸಾರ್ವಜನಿಕ ಬಳಕೆಗೆ ಮುಕ್ತವಾಗಿಸಿದೆ. |
| ಇ) | ಕನ್ನಡ ಅಭಿವೃದ್ಧಿ ಪ್ರಾಧಿಕಾರದವರು ಕಳೆದ ಎರಡು ವರ್ಷಗಳಲ್ಲಿ ಎಷ್ಟು ಕಚೇರಿಗಳಿಗೆ ಭೇಟಿ ನೀಡಿ ಆಡಳಿತದಲ್ಲಿ ಕನ್ನಡ ಬಳಕೆಯಾಗುತ್ತಿದೆಯೇ ಎಂಬ ಬಗ್ಗೆ ತಪಾಸಣೆ ಮಾಡಿದ್ದಾರೆ; ಏನು ವರದಿ ನೀಡಿದ್ದಾರೆ; ಈ ಬಗ್ಗೆ ಯಾವ ಶಿಫಾರಸ್ಸುಗಳನ್ನು ಮಾಡಲಾಗಿದೆ; | ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪ್ರಸ್ತುತ ಅಧ್ಯಕ್ಷರು ಜೂನ್ 24ರಲ್ಲಿ ಅಧಿಕಾರ ವಹಿಸಿಕೊಂಡಿದ್ದು, ಅವರ ನೇತೃತ್ವದಲ್ಲಿ ಇಲ್ಲಿಯವರೆಗೆ ರಾಜ್ಯದ ವಿವಿಧ ಇಲಾಖೆಗಳ 20 ಕಚೇರಿಗಳಿಗೆ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನೆಯ ಭಾಗವಾಗಿ ಭೇಟಿ ನೀಡಲಾಗಿದೆ. ಹಲವು ನಿರ್ದೇಶನಗಳನ್ನು ನೀಡಲಾಗಿದೆ. ವರದಿಯನ್ನು ಅನುಬಂಧದಲ್ಲಿ ಒದಗಿಸಿದೆ. |
| ಈ) | ಕನ್ನಡವನ್ನು ಬಳಸದ ಎಷ್ಟು ಅಧಿಕಾರಿ ಮತ್ತು ನೌಕರರ ಮೇಲೆ ಕ್ರಮ ಕೈಗೊಳ್ಳಲಾಗಿದೆ? (ಕಳೆದ ಎರಡು ವರ್ಷಗಳ ಮಾಹಿತಿ ನೀಡುವುದು) | ಈ ರೀತಿಯ ಪ್ರಕರಣಗಳು ಇರುವುದಿಲ್ಲ |

**ಸಂಖ್ಯೆ**.ಕಸಂವಾ 40 ಕೆಬಿಎಲ್ ಆಕ 2025

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

# ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯ ವಿವರಗಳು

ಕಳೆದ ಒಂದು ವರ್ಷದ ಅವಧಿಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೆಳಕಂಡ ಜಿಲ್ಲೆಗಳ ಕಚೇರಿ/ ವಿಶ್ವವಿದ್ಯಾಲಯ/ ಸಂಸ್ಥೆಗಳ ಆಡಳಿತದಲ್ಲಿ ಕನ್ನಡ ಅನುಷ್ಠಾನ ಕುರಿತಂತೆ ಪರಿಶೀಲನಾ ಸಭೆಗಳನ್ನು ನಡೆಸಿ ಸೂಚನೆಗಳನ್ನು ನೀಡಲಾಗಿದೆ.

| ಕ್ರಸಂ | ದಿನಾಂಕ | ಕಚೇರಿ/ ಸಂಸ್ಥೆ |
|---|---|---|
| 1 | 15-07-2024 | ಬೀದರ ಜಿಲ್ಲಾಧಿಕಾರಿಗಳ ಕಚೇರಿ, ಬೀದರ ಜಿಲ್ಲೆ |
| 2 | 15-07-2024 | ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಜಿಲ್ಲೆ |
| 3 | 15-07-2024 | ಬೀದರ ವಿಶ್ವವಿದ್ಯಾಲಯ, ಬೀದರ ಜಿಲ್ಲೆ |
| 4 | 16-07-2024 | ಕಲಬುರಗಿ ಜಿಲ್ಲಾಧಿಕಾರಿಗಳ ಕಚೇರಿ, ಕಲಬುರಗಿ ಜಿಲ್ಲೆ |
| 5 | 16-07-2024 | ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಜಿಲ್ಲೆ |
| 6 | 16-07-2024 | ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ ಜಿಲ್ಲೆ |
| 7 | 13-08-2024 | ರಾಯಚೂರು ಜಿಲ್ಲಾಧಿಕಾರಿಗಳ ಕಚೇರಿ, ರಾಯಚೂರು ಜಿಲ್ಲೆ |
| 8 | 13-08-2024 | ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಜಿಲ್ಲೆ |
| 9 | 13-08-2024 | ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಜಿಲ್ಲೆ |
| 10 | 28-11-2024 | ಎಚ್‌ಎಎಲ್ (ವಿಮಾನಪುರ) ಕಚೇರಿ, ಬೆಂಗಳೂರು ನಗರ |
| 11 | 03-12-2025 | ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿ, ಮಂಡ್ಯ ಜಿಲ್ಲೆ |
| 12 | 19-12-2024 | ಕರ್ನಾಟಕ ಭವನ, ನವದೆಹಲಿ |
| 13 | 17-01-2025 | ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಚೇರಿ, ಶಿವಮೊಗ್ಗ ಜಿಲ್ಲೆ |
| 14 | 17-01-2025 | ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ ಜಿಲ್ಲೆ |
| 15 | 24-01-2025 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| 16 | 28-01-2025 | ರಾಜ್ಯಮಟ್ಟದ ಬ್ಯಾಂಕರ್‌ಗಳ ಸಮಿತಿ (ಎಸ್.ಎಲ್.ಬಿ.ಸಿ.) |
| 17 | 12-02-2025 | ಕೋಲಾರ ಜಿಲ್ಲಾಧಿಕಾರಿಗಳ ಕಚೇರಿ, ಕೋಲಾರ ಜಿಲ್ಲೆ |
| 18 | 12-02-2025 | ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ ಜಿಲ್ಲೆ |
| 19 | 15-02-2025 | ಮೈಸೂರು ಜಿಲ್ಲಾಧಿಕಾರಿ ಕಚೇರಿ, ಮೈಸೂರು ಜಿಲ್ಲೆ |
| 20 | 15-02-2025 | ಮೈಸೂರು ವಿಶ್ವವಿದ್ಯಾಲಯ, ಮೈಸೂರು ಜಿಲ್ಲೆ |

ಕಾರ್ಯದರ್ಶಿ
ಕನ್ನಡ ಅಭಿವೃದ್ಧಿ ಪ್ರಾಧಿಕಾರ
ವಿಧಾನಸೌಧ, ಬೆಂಗಳೂರು

Scanned with OKEN Scanner